# ಪ್ರಾರ್ಥನೆ ಅಂದರೆ...

ಎಳೆಯನೊಬ್ಬ ಹೆಗಲಿಗೆ ಭಾರವಾದ ಪುಸ್ತಕದ ಚೀಲ ನೇತುಹಾಕಿಕೊಂಡು ಶಾಲೆಯತ್ತ ನಡೆಯುತ್ತಿದ್ದಾನೆ. ನಡಿಗೆಯಲ್ಲಿ ಉತ್ಸಾಹವಿಲ್ಲ; ಮುಖದಲ್ಲಿ ಗೆಲುವಿಲ್ಲ. ಅಧ್ಯಾಪಕರು ಕೊಟ್ಟಿದ್ದ ಮನೆಯ ಕೆಲಸವನ್ನು– ಏನೋ ತೊಂದರೆಯಿಂದಾಗಿ– ಮಾಡಲಾಗಲಿಲ್ಲ. ಹೀಗಾಗಿ ಶಾಲೆಯಲ್ಲಿ ಯಾವ ಶಿಕ್ಷೆ ಕಾದಿದೆಯೋ ಎಂಬುದೇ ಅವನ ಚಿಂತೆ. 'ದೇವರೇ, ಈ ದಿನ ಮೇಷ್ಟರು ರಜೆ ತೆಗೆದುಕೊಳ್ಳುವಂತೆ ಮಾಡಪ್ಪಾ; ನಿಂಗೆ ಐದು ಸುತ್ತು ಪ್ರದಕ್ಷಿಣೆ ಹಾಕುತ್ತೇನೆ' ಎಂದು ಮನಸ್ಸಿನಲ್ಲೇ ಪ್ರಾರ್ಥಿಸುತ್ತಾ, ಶಾಲೆಯತ್ತ ನಡೆಯುತ್ತಿದ್ದಾನೆ ಹುಡುಗ.

ರಣ ರಣ ಬಿಸಿಲು, ರೈತನೊಬ್ಬ ಹೊಲದ ಬದುವಿನ ಮೇಲೆ ನಿಂತುಕೊಂಡು, ಆಕಾಶದ ಕಡೆಗೇ ನೋಡುತ್ತಿದ್ದಾನೆ. ಮಳೆಯಿಲ್ಲದೆ ಪೈರು ಒಣಗಿ ಕರಕಲಾಗುತ್ತಿದೆ. 'ಭಗವಂತಾ, ಒಂದಿಷ್ಟು ಮಳೆ ಸುರಿಸಪ್ಪಾ! ಬದುಕುವ ಹಾಗೆ ಮಾಡು, ತಂದೆ!' ಎಂದು ಕೈ ಜೋಡಿಸಿ, ಮೊರೆಯಿಡುತ್ತಿದ್ದಾನೆ ಕಂಗಾಲಾದ ರೈತ.

ರೋಗಿ ಮಲಗಿದ್ದಾನೆ; ಮಲಗಿ ಎಷ್ಟು ದಿನಗಳಾದವೋ– ಆತನಿಗೇ ನೆನಪಿಲ್ಲ. ವಾಸಿಯಾಗದ ಕಾಯಿಲೆ. 'ಪರಮಾತ್ಮ, ಕರುಣೆ ತೋರಪ್ಪಾ, ಈ ಯಾತನೆಯಿಂದ ಆದಷ್ಟು ಬೇಗ ಪಾರು ಮಾಡು' ಇದು ರೋಗಿಯ ಹತಾಶೆಯಿಂದ ಹೊಮ್ಮುವ ಪ್ರಾರ್ಥನೆ.

ಪರ್ವತದ ಪ್ರಶಾಂತ ಗುಹೆಯೊಂದರಲ್ಲಿ ಕುಳಿತು, ಕೆಳಗಿನ ಜಗತ್ತಿನ ಚಟುವಟಿಕೆಗಳನ್ನು ಗಮನಿಸುತ್ತಿದ್ದಾನೆ ಯೋಗಿ. ಅಲ್ಲಿ ಸುಖ–ದುಃಖ, ಆಶೆ–ನಿರಾಶೆ, ಸ್ನೇಹ– ವೈರ, ಪ್ರೀತಿ– ಹಿಂಸೆ ಎಲ್ಲವೂ ಇದೆ. ಲೋಕ ಜೀವನ ಈ ದ್ವಂದ್ವಗಳಿಂದ ಪ್ರಕ್ಷುಬ್ಧವಾಗಿದೆ. 'ಭಗವಂತಾ, ನೀನು ದಯಾಮಯ! ಈ ಲೋಕದ ಎಲ್ಲ ಜೀವಿಗಳಿಗೂ ಒಳಿತು ಮಾಡು' ಎಂದು ನಿರ್ಮಲ ಮನಸ್ಸಿನಿಂದ ಪ್ರಾರ್ಥಿಸುತ್ತಾನೆ ಆತ.

ಹೀಗೆ ಪ್ರಾರ್ಥನೆಯ ಹಿಂದೆ ವಿವಿಧ ಕಾರಣಗಳು; ವಿವಿಧ ಸಂದರ್ಭ, ಸನ್ನಿವೇಶಗಳು, ಭೂಮಿಯ ಮೇಲಿನ ಎಲ್ಲ ಸ್ತರದ ಜನರೂ, ಒಂದಲ್ಲ ಒಂದುಬಾರಿ, ತಾವು ಕಾಣದೇ ಇರುವ ಯಾವುದೋ ಒಂದು ಶಕ್ತಿಯನ್ನು ಕುರಿತು– 'ಕರುಣಾಳು ಬಾ ಬೆಳಕೇ... ಕೈ ಹಿಡಿದು ನಡೆಸೆನ್ನನು' ಎಂದು ಮೊರೆಯಿಡುತ್ತಾರೆ. ಉದ್ದೇಶಗಳು ಬೇರೆ, ಬೇಡಿಕೆಗಳು ಬೇರೆ, ಅಷ್ಟೆ. ಬಹಳಷ್ಟು ಜನರ ಪ್ರಾರ್ಥನೆ ವೈಯಕ್ತಿಕ ಬೇಕು– ಬೇಡಗಳಿಗಷ್ಟೇ ಸೀಮಿತವಾಗಿರುತ್ತದೆ. ಎಲ್ಲೋ ಕೆಲವರು ಮಾತ್ರ ಸಮಷ್ಟಿಯ ಹಿತಕ್ಕಾಗಿ ಪ್ರಾರ್ಥನೆ ಸಲ್ಲಿಸುತ್ತಾರೆ. ಅದೇ ಅತ್ಯುನ್ನತ ಸ್ತರದ ಪ್ರಾರ್ಥನೆ.

ಪ್ರಾರ್ಥನೆಯೆಂದರೆ ಹೃದಯದ ಕಾಯಕ. ಅಲ್ಲಿ ಬೌದ್ಧಿಕ ತರ್ಕಕ್ಕೆ ಸ್ಥಾನವಿಲ್ಲ. ಯಾವುದೋ ಒಂದು ಹಿರಿದಾದುದನ್ನು ಕುರಿತು ವ್ಯಕ್ತಿಗಿರುವ ಶ್ರದ್ಧೆ, ನಂಬಿಕೆ, ಭರವಸೆಗಳೇ ಪ್ರಾರ್ಥನೆಯ ಹಿಂದಿರುವ ಪ್ರೇರಣೆ. ಪ್ರಾಮಾಣಿಕ ಪ್ರಾರ್ಥನೆಯೆಂದರೆ ಮಾನವನ ಆತ್ಮಕ್ಕೆ ಲಭಿಸುವ ಶುದ್ಧ ಸ್ನಾನ ಎನ್ನುತ್ತಾರೆ ಗಾಂಧೀಜಿ. ದಿನವೂ ಸ್ನಾನ ಮಾಡದಿದ್ದರೆ ಆರೋಗ್ಯ ಕೆಡುತ್ತದೆ; ಹಾಗೆಯೇ ಹೃದಯವನ್ನು ಪ್ರಾರ್ಥನೆಯಿಂದ ತೊಳೆಯದಿದ್ದರೆ ಅದು ಕಲ್ಮಶದ ಗೂಡಾಗುತ್ತದೆ. ಪ್ರಾರ್ಥನೆಯ ಮೂಲಕ ವ್ಯಕ್ತಿ ತನ್ನ ಅಹಂಕಾರವನ್ನು ಕಳಚಿಕೊಂಡು, ವಿನೀತನಾಗುತ್ತಾನೆ. ಶ್ರದ್ಧಾಪೂರ್ವಕ ಮಾಡಿದ ಪ್ರಾರ್ಥನೆ ವ್ಯಕ್ತಿಯ ಸಂಕಲ್ಪ ಶಕ್ತಿಯನ್ನು ಉದ್ದೀಪಿಸಿ, ಕ್ರಿಯಾಶಕ್ತಿಯನ್ನು ಚುರುಕುಗೊಳಿಸುತ್ತದೆ. ಆದ್ದರಿಂದಲೇ ಟೆನಿಸನ್ ಕವಿ– 'ಮೋರ್ ಥಿಂಗ್ಸ್ ಆರ್ ರೋಟ್ ಬೈ ಪ್ರೈಯರ್ ದೆನ್ ದಿ ವರ್ಲ್ಡ್ ಡ್ರೀಮ್ಸ್ ಆಫ್' ಎಂದಿರುವುದು. ಪ್ರಾರ್ಥನೆ ಎಂಬ ಅನ್ನವಿಲ್ಲದಿದ್ದರೆ ನಮ್ಮ ಆತ್ಮ ಸೊರಗುತ್ತದೆ; ವ್ಯಕ್ತಿತ್ವ ಮುರುಟಿಕೊಳ್ಳುತ್ತದೆ.

ರೂಪಕದ ಭಾಷೆಯಲ್ಲಿ ಹೇಳುವುದಾದರೆ, ಪ್ರಾರ್ಥನೆ ಎಂಬುದು– ಅದರ ಅತ್ಯುದಾತ್ತ ಅರ್ಥದಲ್ಲಿ– ಆಲಯವನ್ನು ಬಯಲಾಗಿಸುವ ಪ್ರಕ್ರಿಯೆ. ಆಲಯ ಮನುಷ್ಯ ನಿರ್ಮಿತ. ಅಲ್ಲಿರುವುದು ಸ್ವಕೀಯತೆ, ಸ್ವಾರ್ಥ, ಸಂಕುಚಿತತೆ, ಬಯಲು ಭಗವಂತನ ಸೃಷ್ಟಿ. ಅದು ಮುಕ್ತವಾದುದು, ಸ್ವಾರ್ಥ– ಸಂಕೋಚಗಳಿಂದ ಅತೀತವಾದುದು, ವಿಸ್ತಾರವಾದುದು. ಆಲಯ ಬಯಲಾಗುವುದೆಂದರೆ, ವೈಯಕ್ತಿಕತೆ ವಿಶ್ವಾತ್ಮನಲ್ಲಿ ಕರಗಿಹೋಗುವ ಪ್ರಕ್ರಿಯೆ; ವ್ಯಷ್ಟಿ ಚೈತನ್ಯ ವಿಶ್ವ ಚೈತನ್ಯದೊಂದಿಗೆ ಲಯಗೊಳ್ಳುವ ಸ್ಥಿತಿ. ಇದೇ ನಿಜವಾದ ಪ್ರಾರ್ಥನೆಯ ಪರಮ ಗುರಿ. ಸಂಗೀತಗಾರನೊಬ್ಬ ತನ್ನ ಶಾರೀರವನ್ನು ಮೂಲ ಶ್ರುತಿಯೊಂದಿಗೆ ಸಂಲಗ್ನಗೊಳಿಸಿ ಹಾಡುವಂತೆ, ಪ್ರಾರ್ಥಿಸುವಾತ ತನ್ನ ವೈಯಕ್ತಿಕತೆಯನ್ನು ವಿಶ್ವಚೈತನ್ಯದೊಂದಿಗೆ ಶ್ರುತಿಗೊಳಿಸಿಕೊಳ್ಳುತ್ತಾನೆ. ಪ್ರಾರ್ಥನೆಯಿಂದಾಗಿ ದ್ವೈತವೆಂಬುದು ಅದ್ವೈತವಾಗುತ್ತದೆ. ವ್ಯಕ್ತಿಯ ಉಸಿರು, ಮಹಾಪ್ರಜ್ಞೆಯ ಉಸಿರಲ್ಲಿ ಸೇರಿ, ತನ್ನ ಪ್ರತ್ಯೇಕತೆಯನ್ನು ಕಳೆದುಕೊಳ್ಳುತ್ತದೆ. ಆಗಲೇ ಪ್ರಾರ್ಥನೆ ತಪಸ್ಸಾಗುತ್ತದೆ!

■ ವೈನತೇಯ

## ಮಾತೇ ಮುತ್ತು

★ ಇತರರಿಗೆ ಸಹಾಯ ಮಾಡುವ ಅತ್ಯುತ್ತಮ ಮಾರ್ಗ ಎಂದರೆ ಅವರ ಯೋಗಕ್ಷೇಮವನ್ನು ಅವರೇ ನೋಡಿಕೊಳ್ಳುವಂತೆ ಪ್ರೋತ್ಸಾಹಿಸುವುದು. ಅವರು ಹಾಗೆ ಮಾಡಿದಾಗ ಬಹುಮಾನಿಸುವುದು.

–ಸ್ಪೆನ್ಸರ್ ಜಾನ್‌ಸನ್

★ ತಮಗೆ ತಾವೇ ಸಹಾಯ ಮಾಡಿಕೊಳ್ಳುವವರಿಗೆ ದೇವರು ಸಹಾಯ ಮಾಡುತ್ತಾನೆ.

–ಈಸೋಪ್

★ ಮಂದಿಯ ಸ್ವಾತಂತ್ರ್ಯ ಹರಣ ಮಾಡುವುದು ಪಾತಕವಾಗಿದ್ದರೆ, ತನ್ನ ಸ್ವಾತಂತ್ರ್ಯವನ್ನು ತಾನೇ ನಷ್ಟಪಡಿಸಿಕೊಳ್ಳುವುದು ಮಹಾಪಾತಕ.

–ಗಳಗನಾಥ

★ ಎಲ್ಲರೂ ಸ್ವತಂತ್ರರಾಗುವವರೆಗೆ ಯಾರೂ ಪೂರ್ಣ ಸ್ವತಂತ್ರರಲ್ಲ.

–ಹರ್ಬರ್ಟ್ ಸ್ಪೆನ್ಸರ್

★ ಅನುಭವವಿಲ್ಲದವನ ಬರಿ ಮಾತು ಬಿದಿರಿನ ಬುಟ್ಟಿಯಲ್ಲಿ ನೀರು ತುಂಬಿದಂತೆ.

–ಶಿವಮೂರ್ತಿ ಮುರುಘಾ ಶರಣರು

★ ತಾವು ಇರುವ ಕತ್ತಲೆಯನ್ನು ಅರಿಯದವರು ಬೆಳಕಿಗಾಗಿ ಎಂದೂ ಹುಡುಕುವುದಿಲ್ಲ. ಉತ್ತಮ ಶಿಕ್ಷಣ ಈ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ.

–ಬಿ.ಆರ್.ಅಂಬೇಡ್ಕರ್

★ 'ನಾನು' ಎಂಬುದು ಬಹು ಕೆಟ್ಟದ್ದು; ಅದನ್ನು ಬೇಗ ಹೊರಗೆ ಓಡಿಸಿಬಿಡು.

–ಕಬೀರ ವಚನಾವಳಿ

★ ವಿಕಾಸವೇ ಜೀವನ, ಸಂಕೋಚವೇ ಮರಣ. ಎಲ್ಲ ಬಗೆಯ ಪ್ರೀತಿಯೂ ವಿಕಾಸ, ಸ್ವಾರ್ಥವೇ ಸಂಕೋಚ.

–ಸ್ವಾಮಿ ವಿವೇಕಾನಂದ

★ ಅಭಿನಯ ಚಲೋ ಇತ್ತು ಅಂದ್ರ ಓದಿದಾವ ಇರಲಿ, ಓದದಾವ ಇರಲಿ, ಎಲ್ಲರಿಗೂ ಒಂದ ನಮೂನಿ ಖುಶಿ ಸಿಗ್ತತಿ. ಸಕ್ಕರೀನ ಸಕ್ಕರಿ ಅಂತಾನ ಹೇಳಬೇಕಾಕ್ಕತಿ, ಉಪ್ಪನ್ನ ಉಪ್ಪು ಅಂತಾನ ಹೇಳಬೇಕಾಕ್ಕತಿ. ಸಕ್ಕರಿಗೆ ಉಪ್ಪು ಅನ್ನಾಕ ಬರದಿಲ್ಲ, ಉಪ್ಪಿಗೆ ಸಕ್ಕರಿ ಅನ್ನಾಕ ಬರದಿಲ್ಲ.

–ಚಿಂದೋಡಿ ಲೀಲಾ

★ ಗಂಟಲೊಳಗಿನ ವಿಷ ಗಂಟಲೊಳಗಿದ್ರನ ಚಂದ. ಆ ವಿಷ ಗಂಟಲದಲ್ಲಿ ಹಿಡಿದಲ್ಲೇ ಶಿವ ನೀಲ ಕಂಠ ಅನ್ನಿಸಿಕೊಂಡ.

–ಪಿ.ಬಿ.ಧುತ್ತರಗಿ

★ ಬದಲಾವಣೆ ಪ್ರಕೃತಿ ನಿಯಮ. ಸಾಂಪ್ರದಾಯಿಕ ಕಲೆ ಬೇರಿದ್ದಂತೆ. ಆ ಬೇರು ಹರಡಲು ಸಮಕಾಲೀನ ನೃತ್ಯದಂಥ ಪ್ರಯೋಗಗಳು ಅವಶ್ಯ. ಕೊನೆಗೆ ಉಳಿಯುವುದು ಬೇರು, ಸಾಂಪ್ರದಾಯಿಕತೆ.

–ವೈಜಯಂತಿ ಕಾಶಿ

★ ಓದದೇ ಬರೆಯುವುದಾದರೆ ಹೇಗೆ? ಪತ್ರಕರ್ತರು ಹೆಚ್ಚು ಓದಬೇಕು. ಯಾವ ಪತ್ರಕರ್ತ ಪುಸ್ತಕಗಳನ್ನು ಓದುವುದಿಲ್ಲವೋ ಅವನ ಪತ್ರಿಕಾ ಬರಹ ಓದಲಾಗುವುದಿಲ್ಲ.

–ಎಚ್.ವೈ. ಶಾರದಪ್ರಸಾದ್

★ ಸ್ವರ್ಗಕ್ಕೆ ದಾರಿ ಇದೆ, ಯಾರೂ ಅತ್ತ ಹೋಗರು: ನರಕಕ್ಕೆ ಬಾಗಿಲಿಲ್ಲ, ಆದರೂ ಜನ ಅತ್ತ ನುಗ್ಗುವರು.

–ಚೀನಾ ಗಾದೆ